ಫೆಬ್ರುವರಿ 2022 ಸಂಪುಟ: 5 ಸಂಚಿಕೆ 02 ಪುಟಗಳು: 2 ಖಾಸಗಿ ಪ್ರಚಾರಕ್ಕಾಗಿ ಮಾತ್ರ.....

# ಆರ್‌ಸಿಯು ಧ್ವನಿ

R.C.U DHWANI

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ...

## ಸಾವಿತ್ರಿಬಾಯಿ ಪುಲೆ ಭಾರತದ ಅಕ್ಷರ ತಾಯಿ



ಆರ್‌ಸಿಯುದಲ್ಲಿ ಜರುಗಿದ ಸಾವಿತ್ರಿಬಾಯಿ ಫುಲೆ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ಎಂ ರಾಮಚಂದ್ರಗೌಡ ಮಾತನಾಡಿದರು.

**ವಿದ್ಯಾಸಂಗಮ:** ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಪೀಠ ಹಾಗೂ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ಸೋಮವಾರ (3 ಜನೇವರಿ 2022) ಸಾವಿತ್ರಿಬಾಯಿ ಪುಲೆ ಅವರ ಜನ್ಮ ದಿನಾಚರಣೆಯನ್ನು ಕುವೆಂಪು ಸಭಾಂಗಣದಲ್ಲಿ ಆಚರಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಆರ್‌ಸಿಯು ಕುಲಪತಿ ಪ್ರೊ. ಎಂ. ರಾಮಚಂದ್ರಗೌಡ ಮಾತನಾಡಿ, ಶ್ರೀಮತಿ ಸಾವಿತ್ರಿಬಾಯಿ ಪುಲೆ ಅವರನ್ನು ಭಾರತದ ಅಕ್ಷರ ತಾಯಿ ಎಂದು ಕರೆಯಲಾಗುತ್ತದೆ. ಸಾವಿತ್ರಿಬಾಯಿ ಪುಲೆ ಅವರ ಜೀವನ ನಮಗೆ ಆದರ್ಶವಾಗಬೇಕು ಇಂದು ಉನ್ನತ ಶಿಕ್ಷಣದಲ್ಲಿ ಹೆಚ್ಚಿನ ಮಹಿಳೆಯರು ಪಾಲ್ಗೊಳ್ಳುತ್ತಿರುವುದು ಪುಲೆಯವರ ಅಂದಿನ ಪ್ರಯತ್ನವೇ ಕಾರಣ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿ ರಾಣಿ ಪಾರ್ವತಿದೇವಿ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಎಚ್. ಬಿ. ಕೋಲಕಾರ ಮಾತನಾಡಿ, ಈ ದೇಶದಲ್ಲಿ ಸಮಾಜದ ಸಮಾನತೆ ಮತ್ತು ಶಿಕ್ಷಣವನ್ನು ದಿನ ದಲಿತ ಮಹಿಳೆಯರಿಗೆ ನೀಡಲು ಸಾವಿತ್ರಿಬಾಯಿ ಪ್ರಯತ್ನಿಸಿದರು. ಈ ತಾಯಿ ಅಕ್ಷರದ ಅರಿವನ್ನು ನೀಡಿದರು ಮತ್ತು ಮನೆ ಮನೆಗೆ ಶಿಕ್ಷಣ ತಲುಪಿಸಿದರು. ಸಮಸ್ತ ಸಮಾಜವನ್ನು ತನ್ನ ಒಂದು ಮಗುವಿನಂತೆ ಅವರು ಪರಿಭಾವಿಸಿದರು. ಇದರಿಂದಾಗಿ ಪುಲೆ ಅವರ ಬದುಕನ್ನು ಚರಿತ್ರೆಯಲ್ಲಿ ಅನೇಕರು ವಿವಿಧ ಮಾದರಿಯಲ್ಲಿ ದಾಖಲಿಸಿದ್ದಾರೆ. ದೇವದಾಸಿಗಳ ಬದುಕಿಗೆ ಮತ್ತು ವಿಧವೆಯರ ಪುನರ್ವಿವಾಹಕ್ಕೆ ಹೋರಾಡಿದರು. ಅವರ ಜೀವನ ನಮ್ಮೆಲ್ಲರಿಗೂ ಆದರ್ಶವಾಗಬೇಕು ಎಂದು ಹೇಳಿದರು.

ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಪ್ರಾಸ್ತಾವಿಕವಾಗಿ ಮಾತನಾಡಿ, ಸಾವಿತ್ರಿಬಾಯಿ ಪುಲೆ ಅವರ ಜೀವನ ಮತ್ತು ತ್ಯಾಗವನ್ನು ಸ್ಮರಿಸಿದರು.


ಮೌಲ್ಯಮಾಪನ ಕುಲಸಚಿವ ಡಾ. ವೀರನಗೌಡ ಪಾಟೀಲ, ಹಣಕಾಸು ಅಧಿಕಾರಿ ಪ್ರೊ. ಡಿ. ಎನ್. ಪಾಟೀಲ, ವಿವಿಧ ವಿಭಾಗದ ಪ್ರಾಧ್ಯಾಪಕರು, ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಜರಿದ್ದರು.

ಶ್ರೀಮಂತ ಮಾದರ ಪ್ರಾರ್ಥಿಸಿದರು. ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ಪೀಠದ ಸಂಯೋಜಕ ಡಾ. ಗಜಾನನ ನಾಯ್ಕ ನಿರೂಪಿಸಿದರು. ಪೀಠದ ನಿರ್ದೇಶಕ ಪ್ರೊ. ಚಂದ್ರಕಾಂತ ವಾಘ್ಮಾರೆ ವಂದಿಸಿದರು.

## ಬಸವಲಿಂಗಯ್ಯ ಹಿರೇಮಠ ಮತ್ತು ಚಂಪಾಗೆ ನುಡಿನಮನ ಮತ್ತು ಶೃದ್ಧಾಂಜಲಿ ಕಾರ್ಯಕ್ರಮ



ಚಂದ್ರಶೇಖರ ಪಾಟೀಲ



ಬಸವರಾಜ ಹಿರೇಮಠ

**ವಿದ್ಯಾಸಂಗಮ:** ಇತ್ತೀಚೆಗೆ ಅಗಲಿದ ಸಾರಸ್ವತ ಲೋಕದ ಸಾಧಕರಾದ ರಂಗಕಲಾವಿದ ಬಸವಲಿಂಗಯ್ಯ ಹಿರೇಮಠ ಮತ್ತು ಸಾಹಿತಿ ಚಂದ್ರಶೇಖರ ಪಾಟೀಲರಿಗೆ ಶೃದ್ಧಾಂಜಲಿ ಮತ್ತು ನುಡಿನಮನ ಕಾರ್ಯಕ್ರಮ ಸೋಮವಾರ (10 ಜನೇವರಿ 2022) ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ವಿಭಾಗದಲ್ಲಿ ಜರುಗಿತು.

ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಗಜಾನನ ನಾಯ್ಕ ಮಾತನಾಡಿ, ರಂಗ ಕಲಾವಿದರಾದ ಬಸವಲಿಂಗಯ್ಯ ಹಿರೇಮಠ ರಂಗ ಶಿಕ್ಷಣವನ್ನು ನೀನಾಸಂನಲ್ಲಿ ಪಡೆದು, ಉತ್ತರ ಕರ್ನಾಟಕದ ಗಮನಾರ್ಹ ಜಾನಪದರಂಗ ಕಲಾವಿದರಾಗಿದ್ದರು. ಸುಗಮ ಸಂಗೀತ, ರಂಗಗೀತೆಗಳನ್ನು ಮತ್ತು ಕುಲಗೋಡದ ಅಪರಾಳ ತಮ್ಮಣ್ಣ, ಶ್ರೀಕೃಷ್ಣ ಪಾರಿಜಾತ, ಹನ್ನೆರಡು ತಾಸಿನ ನಾಟಕವನ್ನು ಮೂರು ತಾಸಿಗೆ ತಂದು ಜನಮನ್ನಣೆಯನ್ನು ಪಡೆದಿದ್ದರು. ಅವರು ಕಂಚಿನ ಕಂಠದ ಕಲಾವಿದರಾಗಿದ್ದರು. ಹಲವಾರು ಪ್ರಶಸ್ತಿಯನ್ನು ಪಡೆದಿದ್ದ ಶ್ರೀಯುತರ ಅಗಲಿಕೆಯಿಂದ ಜನಪದ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ ಎಂದು ಸ್ಮರಿಸಿದರು.

ಹಿರಿಯ ಸಾಹಿತಿ, ಕವಿ ಮತ್ತು ನಾಟಕಕಾರ ಮತ್ತು ಚಂಪಾ ಎಂದೇ ಖ್ಯಾತರಾದ ಚಂದ್ರಶೇಖರ ಪಾಟೀಲ ಕನ್ನಡ ನಾಡು, ನುಡಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜೈಲಿನಲ್ಲಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಹಲವಾರು ಕಾರ್ಯಕ್ರಮ ನಿಯೋಜಿಸಿದರು. ನಾಡಿಗೆ ಅವರ ಸೇವೆ ಅನುಪಮವಾಗಿದೆ. ವಿದ್ಯಾರ್ಥಿಗಳು ಅವರ ಸಾಹಿತ್ಯ ಕೃತಿಗಳನ್ನು ಓದುವುದೇ ನಿಜವಾದ ಶೃದ್ಧಾಂಜಲಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರೊ. ಎಸ್. ಎಂ. ಗಂಗಾಧರಯ್ಯ ಮಾತನಾಡಿ, ಈ ಇಬ್ಬರು ಅತಿ ಬಡ ಕುಟುಂಬದಲ್ಲಿ ಜನಿಸಿದರು ಕೂಡಾ, ಸಾಹಿತ್ಯ ಲೋಕಕ್ಕೆ ಅವರು ನೀಡಿದ ಕೊಡುಗೆ ಅಪಾರವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಡಾ.ಮಹೇಶ ಗಾಜಪ್ಪನವರ, ಡಾ.ಶೋಭಾ ನಾಯಕ ಹಾಗೂ ಡಾ.ಅಶೋಕ ಮುಧೋಳ, ವಿದ್ಯಾರ್ಥಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಇದ್ದರು. ವಿಠ್ಠಲ ಹರಿಜನ ನಿರೂಪಿಸಿದರು.

## ಭಾರತೀಯ ಸಂಸ್ಕೃತಿ ವಿಶ್ವಕ್ಕೆ ಪರಿಚಯಿಸಿದ್ದು ಸ್ವಾಮಿ ವಿವೇಕಾನಂದ





ಆರ್‌ಸಿಯುದಲ್ಲಿ ಜರುಗಿದ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮದಲ್ಲಿ ಪ್ರಮುಖ ವಕ್ತಾರ ವಿಜಯ ಮಹೇಂದ್ರಕರ ಮತ್ತು ಅಧ್ಯಕ್ಷತೆ ವಹಿಸಿದ್ದ ಕುಲಸಚಿವ ಪ್ರೊ. ಬಸವರಾಜ ಪದ್ಮಾಶಾಲಿ ಮಾತನಾಡಿದರು.

**ವಿದ್ಯಾಸಂಗಮ:** ಬ್ರಿಟಿಷರು ದುರಾಡಳಿತ ಮಾತ್ರ ನಡೆಸದೆ ಭಾರತದಲ್ಲಿ ವಿದೇಶಿ ಸಂಸ್ಕೃತಿ ಹೇರಲು ಮುಂದಾದಾಗ, ಭಾರತೀಯತೆ, ಸನಾತನ ಸಂಸ್ಕೃತಿಗೆ ಕುತ್ತು ಬಂದಾಗ, ಭಾರತೀಯರಲ್ಲಿ ಮಾತ್ರವಲ್ಲದೆ ಸಮಸ್ತ ವಿಶ್ವದಲ್ಲಿ ಭಾರತದ ಸನಾತನ ಧರ್ಮ ಮತ್ತು ಚಿಂತನೆಯನ್ನು ಹರಡುವಂತೆ ಮಾಡಿದವರಲ್ಲಿ ಸ್ವಾಮಿ ವಿವೇಕಾನಂದರು ಅಗ್ರಗಣ್ಯರು ಎಂದು ನ್ಯಾಯವಾದಿ ವಿಜಯ ಮಹೇಂದ್ರಕರ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪಂಡಿತ ದೀನದಯಾಳ ಉಪಾಧ್ಯಾಯ ಅಧ್ಯಯನ ಪೀಠದ ನೇತೃತ್ವದಲ್ಲಿ ಬುಧವಾರ (12 ಜನೇವರಿ 2022) ವಿವಿಯ ಕುವೆಂಪು ಸಭಾಂಗಣದಲ್ಲಿ ಜರುಗಿದ ಸ್ವಾಮಿ ವಿವೇಕಾನಂದ ಜಯಂತಿ ಮತ್ತು ರಾಷ್ಟ್ರೀಯ ಯುವ ದಿನದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಬ್ರಿಟಿಷರು ವ್ಯವಸ್ಥಿತವಾಗಿ ವೇದ, ಉಪನಿಷತ್ತು, ಭಗವದ್ಗೀತೆ ಮತ್ತು ಭಾರತೀಯ ತತ್ವಜ್ಞಾನ ಕನಿಷ್ಠವಾಗಿದೆ ಮತ್ತು ಅಪ್ರಸ್ತುತವಾಗಿದೆ ಎಂದು ಭಾರತೀಯರಲ್ಲಿ ಮೂಡಿಸಲು ಅನೇಕ ಯೋಜನೆಗಳನ್ನು ರೂಪಿಸಿದರು. ರೋಮನ್ ಮತ್ತು ಗ್ರೀಕ್ ಸಂಸ್ಕೃತಿ ಜಗತ್ತಿನಲ್ಲಿ ಶ್ರೇಷ್ಠ ಎಂದು ಸಾರಲು ಮುಂದಾಗಿದ್ದರು. ಈ ಎಲ್ಲ ಯೋಜನೆಗಳನ್ನು ವಿಫಲವಾಗುವಂತೆ ಮಾಡುವುದರಲ್ಲಿ ಸ್ವಾಮಿ ವಿವೇಕಾನಂದರ ಪಾತ್ರ ಅನನ್ಯವಾಗಿದೆ ಎಂದು ಹೇಳಿದರು.

ಸ್ವಾಮಿ ವಿವೇಕಾನಂದರು ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಯ ಪಾಂಡಿತ್ಯ ಹೊಂದಿದ್ದರು. ಅವರು ತಮ್ಮ ಯೌವನಾವಸ್ಥೆಯಲ್ಲಿಯೇ ವೇದ, ಉಪನಿಷತ್ತು, ಭಗವದ್ಗೀತೆ, ಪಾನೀನಿ ವ್ಯಾಕರಣ ಮತ್ತು ಪತಂಜಲಿ ಯೋಗದ ಕುರಿತಾಗಿ ಅಧ್ಯಯನಗೈದಿದ್ದರು. ಹಾಗಾಗೀ ಭಾರತೀಯ ಸಂಸ್ಕೃತಿಯನ್ನು ವಿದೇಶಿ ನೆಲದಲ್ಲಿ ಅವರ ಭಾಷೆಯಲ್ಲಿಯೆ ತಿಳಿಯುವಂತೆ ವಿಶ್ವಕ್ಕೆ ಸಾರಿದರು. ಬ್ರಿಟಿಷರು ಭಾರತದಲ್ಲಿ ಮತ ಪ್ರಚಾರಕ್ಕೆ ಹೆಚ್ಚು ಒತ್ತು ನೀಡಿದಾಗ, ಹಸಿದವರಿಗೆ ತತ್ವಜ್ಞಾನ ಮತ್ತು ಮತೋಪದೇಶ ನೀಡಬೇಡಿ, ಅವರಿಗೆ ಬದುಕಲು ಅನ್ನ ನೀಡಿ ಎಂದು ಕಟುವಾಗಿ ಟೀಕಿಸಿ, ಬ್ರಿಟಿಷರ ಶೋಷಣೆಯನ್ನು ಖಂಡಿಸಿದ್ದರು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಮಾತನಾಡಿ, ಸ್ವಾಮಿ ವಿವೇಕಾನಂದರು ಯುವಕರ ಪ್ರೇರಣೆಯಾಗಿದ್ದಾರೆ. ಅವರ ಚಿಂತನೆ ಮತ್ತು ಜೀವನದ ಆದರ್ಶಗಳನ್ನು ಯುವ ಜನಾಂಗ ಅಳವಡಿಸಿಕೊಂಡರೆ, ಜೀವನ ಯಶಸ್ಸು ಹೊಂದುವುದರಲ್ಲಿ ಯಾವುದೇ ಸಂದೇಹವಿಲ್ಲ. ಸ್ವಾಮಿ ವಿವೇಕಾನಂದರು ಕೇವಲ 39 ವರ್ಷ ಮಾತ್ರ ಜೀವಿಸಿದ್ದಾರೆ. ಆದರೆ ಅವರ ಕಾರ್ಯ, ಸಾಧನೆ ಮೂಲಕ ನಾವೆಲ್ಲರೂ ಈಗಲೂ ಪ್ರೇರಣೆ ಪಡೆಯುತ್ತಿದ್ದೇವೆ ಎಂದರು.

ಬಸವರಾಜ ಅಂಕಲಗಿ ಮತ್ತು ಪ್ರವೀಣ ಮುಧೋಳ ಸ್ವಾಮಿ ವಿವೇಕಾನಂದರ ಕುರಿತಾಗಿ ಮಾತನಾಡಿದರು.

ಮೌಲ್ಯಮಾಪನ ಕುಲಸಚಿವ ಡಾ. ವೀರನಗೌಡ ಪಾಟೀಲ, ಹಣಕಾಸು ಅಧಿಕಾರಿ ಪ್ರೊ. ಡಿ.ಎನ್.ಪಾಟೀಲ, ಪ್ರೊ. ಎಸ್. ಎಂ. ಹುರಕಡ್ಲಿ, ಪ್ರೊ. ಬಿ.ಎಸ್.ನಾವಿ, ಪ್ರೊ. ವೈ. ಎಸ್. ಬಲವಂತಗೋಳ, ಪ್ರೊ. ಯರಿಸ್ವಾಮಿ ಭಾಗವಹಿಸಿದ್ದರು.

ಪ್ರಭು ಸುಣಗಾರ ಪ್ರಾರ್ಥಿಸಿದರು. ಅಧ್ಯಯನ ಪೀಠದ ಸಂಯೋಜಕ ಡಾ.ಪ್ರಕಾಶ ಕಟ್ಟಿಮನಿ ಸ್ವಾಗತಿಸಿ ದರು. ಡಾ.ಶಿವಲಿಂಗಯ್ಯ ಗೋಠೆ ನಿರೂಪಿಸಿದರು. ಮಂಜು ಕಾಳೆ ವಂದಿಸಿದರು.

# ‘ಮಾಧ್ಯಮ ಪ್ರಜಾಪ್ರಭುತ್ವದ ರಕ್ಷಕ’



ಆರ್‌ಸಿಯು ಪತ್ರಿಕೋದ್ಯಮ ವಿಭಾಗದ ಪುನಶ್ಚೇತನ ಕಾರ್ಯಕ್ರಮದಲ್ಲಿ ಜೆಎಂಸಿ ವಿಭಾಗದ ಮುಖ್ಯಸ್ಥೆ ಪ್ರೊ. ಕಮಲಾಕ್ಷಿ ತಡಸದ ಮಾತನಾಡಿದರು. ಪ್ರೊ. ವಿನಾಯಕ ಬಂಕಾಪುರ ಮತ್ತು ಪ್ರೊ. ವಿಜಯ ನಾಗನ್ನವರ ಚಿತ್ರದಲ್ಲಿದ್ದಾರೆ.

**ವಿದ್ಯಾಸಂಗಮ:** ಸಮಾಜದ ಆಗು ಹೋಗುಗಳನ್ನು, ರಾಜಕೀಯ ವಿದ್ಯಮಾನಗಳ ಏರಿಳಿತಗಳನ್ನು ಸದಾ ಗಮನಿಸುವ ಮಾಧ್ಯಮಗಳು ದೀನರ, ದಲಿತ ಮತ್ತು ದುರ್ಬಲರ ಹಿತಕ್ಕಾಗಿ ಕಾರ್ಯನಿರ್ವಹಿಸುವುದರ ಮೂಲಕ ಪ್ರಜಾಪ್ರಭುತ್ವದ ರಕ್ಷಕನಂತೆ ಕಾರ್ಯನಿರ್ವಹಿಸುತ್ತವೆ ಎಂದು ಆರ್‌ಸಿಯು ಇಂಗ್ಲೀಷ್ ವಿಭಾಗದ ಪ್ರಾಧ್ಯಾಪಕ ಪ್ರೊ. ವಿಜಯ ನಾಗನ್ನವರ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಲ್ಲಿ ಬುಧವಾರ (12 ಜನೇವರಿ 2022) ಜರುಗಿದ ಪುನಶ್ಚೇತನ ಕಾರ್ಯಕ್ರಮ ಹಾಗೂ ಪ್ರಥಮ ಸೆಮಿಸ್ಟರ್ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶದಲ್ಲಿ ಅನೇಕ ಬಾರಿ ರಾಜಕಾರಣಿಗಳು ಸಂವಿಧಾನದ ಆಶೋತ್ತರಗಳನ್ನು ಗಾಳಿಗೆ ತೂರಿ ಸ್ವಜನ ಪಕ್ಷಪಾತ ಮತ್ತು ದುರಾಡಳಿತ ನಡೆಸಿದಾಗ, ಮಾಧ್ಯಮಗಳು ಆ ರಾಜಕಾರಣಿಗಳ ವಿರುದ್ಧ ಜನಜಾಗೃತಿ ಮೂಡಿಸಿ, ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಿವೆ. ಮಾಧ್ಯಮಗಳು ಭ್ರಷ್ಟ ರಾಜಕಾರಣಿ ಮತ್ತು ಅಧಿಕಾರಿಗಳಿಗೆ ಸಿಂಹಸ್ವಪ್ನವಾಗಿ ಕಾಟ ನೀಡಿದ ಪರಿಣಾಮ ಸರ್ಕಾರದಲ್ಲಿ ಕೆಲವೆಡೆ ಉತ್ತಮ ಆಡಳಿತ ಕಾಣಬಹುದಾಗಿದೆ ಎಂದರು.

ಎದೆಗಾರಿಕೆ ಮತ್ತು ವೇಗ ಪತ್ರಕರ್ತರಲ್ಲಿ ಇರಬೇಕಾದ ಬಹುಮುಖ್ಯ ಗುಣಗಳು. ಈ ಗುಣಗಳನ್ನು ಪತ್ರಿಕೋದ್ಯಮದ ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು. ಪತ್ರಕರ್ತರು ಅನೇಕ ಒತ್ತಡ ಮತ್ತು ಬೆದರಿಕೆಗಳನ್ನು ಎದುರಿಸಬೇಕಾಗುತ್ತದೆ. ಆ ಸಂಗತಿಗಳಿಗೆಲ್ಲ ಜಗ್ಗದೇ, ಸಮಾಜದ ಒಳತಿಗೆ ಕಾರ್ಯನಿರ್ವಹಿಸಲು ಪತ್ರಕರ್ತರು ಮುಂದಾಗಬೇಕು. ಮಾಧ್ಯಮಗಳು ಸಾಮಾಜಿಕ ಕಳಕಳಿಯನ್ನು ತೊರೆದರೆ ಮತ್ತು ಪತ್ರಕರ್ತರು ಭ್ರಷ್ಟವಾದರೆ, ನಾಗರಿಕ ಸಮಾಜವು ಪತನ ಹೊಂದುವುದು ಎಂದು ನುಡಿದರು.

ಪತ್ರಿಕೋದ್ಯಮ ವಿದ್ಯಾರ್ಥಿಗಳು ಪ್ರಾದೇಶಿಕ ಭಾಷೆಯ ಜೊತೆಗೆ ಇಂಗ್ಲೀಷ್‌ಗೂ ಹೆಚ್ಚಿನ ಆದ್ಯತೆ ನೀಡಬೇಕು. ಬಹುಭಾಷಾ ಪಾಂಡಿತ್ಯ ಹೊಂದಿದವರು ಪತ್ರಿಕೋದ್ಯಮದಲ್ಲಿ ಬಹಳಷ್ಟು ಅವಕಾಶಗಳನ್ನು ಬಾಚಿಕೊಳ್ಳಬಹುದು. ಇಂಗ್ಲೀಷ್ ಭಾಷೆಯ ಮೇಲೆ ಹಿಡಿತ ಸಾಧಿಸಿದರೆ, ಹೊಸ ಅವಕಾಶಗಳು ಅರಸಿ ಬರುವವು ಎಂದು ತಿಳಿಸಿದರು.

ಮತ್ತೋರ್ವ ಮುಖ್ಯ ಅತಿಥಿ ಪ್ರೊ. ವಿನಾಯಕ ಬಂಕಾಪುರ ಮಾತನಾಡಿ, ಮಾಧ್ಯಮದಲ್ಲಿ ಕಾರ್ಯನಿರ್ವಹಿಸಲು ಆಸಕ್ತಿಯಿರುವ ವಿದ್ಯಾರ್ಥಿಗಳು ನೀವು ಸತತ ಓದು ಮತ್ತು ಬರವಣಿಗೆ ಕಲೆಯನ್ನು ರೂಢಿಸಿಕೊಳ್ಳಬೇಕು. ಆಗ ಮಾತ್ರ ಪತ್ರಿಕೋದ್ಯಮದಲ್ಲಿ ಅನನ್ಯ ಅವಕಾಶಗಳು ನಿಮಗೆ ದೊರೆಯುತ್ತವೆ. ಪತ್ರಿಕೋದ್ಯಮ ವೃತ್ತಿಯಲ್ಲಿ ವೇಗ ಮತ್ತು ಸಮಯಕ್ಕೆ ಬಹಳ ಮಹತ್ವ ನೀಡಲಾಗುತ್ತದೆ. ಒಂದು ಸುದ್ದಿ ತ್ವರಿತವಾಗಿ ನೀಡಿದಾಗ ಮಾತ್ರ ಅದು ಸಮಾಜದ ಮೇಲೆ ಪ್ರಭಾವ ಬೀರಲು ಸಾಧ್ಯ. ಹಾಗಾಗೀ ವೇಗವಾಗಿ ಕಾರ್ಯನಿರ್ವಹಿಸುವುದನ್ನು ವಿದ್ಯಾರ್ಥಿಗಳು ರೂಢಿಸಿ ಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ವಿಭಾಗದ ಮುಖ್ಯಸ್ಥೆ ಪ್ರೊ. ಕಮಲಾಕ್ಷಿ ತಡಸದ ಮಾತನಾಡಿ, ವಿದ್ಯಾರ್ಥಿಗಳು ಆಸಕ್ತಿಯಿಂದ ಕಲಿಕೆಗೆ ಹೆಚ್ಚಿನ ಒತ್ತು ನೀಡಬೇಕು. ಗಡಿಭಾಗದಲ್ಲಿ ಪತ್ರಿಕೋದ್ಯಮದ ಉತ್ಕೃಷ್ಟ ಶಿಕ್ಷಣ ನೀಡಲು ಆರ್‌ಸಿಯು ಕಾಳಜಿ ವಹಿಸುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನುಸಾರ ಪ್ರಸಕ್ತ ದಿನಗಳ ಅವಶ್ಯಕತೆ ಅನುಗುಣವಾಗಿ ಪತ್ರಿಕೋದ್ಯಮ ಶಿಕ್ಷಣ ನೀಡಲು ಆರ್‌ಸಿಯು ಮುಂದಾಗಿದೆ ಎಂದರು.

ಬೋಧಕ ಸಿಬ್ಬಂದಿ ವಿದ್ಯಾಶ್ರೀ ಹಾಲಕೇರಿಮಠ, ಪೂಜಾ ಹೆಗಡೆ, ಅರುಣ ಹೊಸಮಠ ಮತ್ತು ಬೋಧಕೇತರ ಸಿಬ್ಬಂದಿ ವೈಭವ ಮಿಸಾಳೆ ಇದ್ದರು.

ಪ್ರಥಮ ವರ್ಷದ ವಿದ್ಯಾರ್ಥಿಗಳಾದ ರಾಘವೇಂದ್ರ ಸನದಿ ಮತ್ತು ಸಂಜೀವಿನಿ ಉಳ್ಳೆಗಡ್ಡಿ ಅನಿಸಿಕೆ ಹಂಚಿಕೊಂಡರು. ಪ್ರವೀಣ ಹಡಪದ ಸ್ವಾಗತಿಸಿದರು. ಪರಶುರಾಮ ಮುಕನ್ನವರ ವಂದಿಸಿದರು. ಆನಂದ ತುಳಸಿಕಟ್ಟಿ ನಿರೂಪಿಸಿದರು.



ಆರ್‌ಸಿಯು ಇಂಗ್ಲೀಷ್ ಅಧ್ಯಯನ ವಿಭಾಗದ ಪುನಶ್ಚೇತನ ಕಾರ್ಯಕ್ರಮಕ್ಕೆ ಡಾ. ನಾಗರತ್ನಾ ಪರಾಂಡೆ ಚಾಲನೆ ನೀಡಿದರು. ಸಿಂಡಿಕೇಟ್ ಸದಸ್ಯೆ ಡಾ.ನೀತಾ ರಾವ್ ಚಿತ್ರದಲ್ಲಿದ್ದಾರೆ.

## ಇಂಗ್ಲೀಷ್ ಬಂದರೆ, ಜಗತ್ತನ್ನೆ ಜಯಿಸಬಹುದು

**ವಿದ್ಯಾಸಂಗಮ:** ಇಂಗ್ಲೀಷ್ ಭಾಷೆ ಬಳಕೆ ಸರ್ವವ್ಯಾಪಿ ಆಗಿರುವ ಕಾರಣ, ಇಂಗ್ಲೀಷ್ ಭಾಷೆಯ ಕಲಿಕೆ ಪ್ರಸ್ತುತ ದಿನದ ಅವಶ್ಯಕವಾಗಿದೆ. ಇಂಗ್ಲೀಷ್ ಭಾಷೆ ಮೇಲೆ ಪಾಂಡಿತ್ಯ ನಮ್ಮದಾದರೆ, ನಾವು ಜಗತ್ತಿನ ಎಲ್ಲೆಡೆ ಕಾರ್ಯನಿರ್ವಹಿಸಬಹುದು ಎಂದು ಲೇಖಕಿ ಮತ್ತು ಆರ್‌ಸಿಯು ಸಿಂಡಿಕೇಟ್ ಸದಸ್ಯೆ ಡಾ.ನೀತಾ ರಾವ್ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಇಂಗ್ಲೀಷ್ ಭಾಷಾ ಅಧ್ಯಯನ ವಿಭಾಗದಲ್ಲಿ ಇತ್ತೀಚಿಗೆ (11 ಜನೇವರಿ) ಜರುಗಿದ ಪುನಶ್ಚೇತನ ಮತ್ತು ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು.

ಇಂಗ್ಲೀಷ್ ಭಾಷೆಯನ್ನು ನಿರ್ಗಳವಾಗಿ ಮಾತನಾಡುವ ಇಚ್ಛೆಯಿದ್ದರೆ, ಇಂಗ್ಲೀಷ್ ಭಾಷೆಯ ಅಪಾರವಾದ ಶಬ್ದಭಂಡಾರ ನಾವು ಹೊಂದಿರಬೇಕು. ಸತತ ಓದು ಮತ್ತು ಬರವಣಿಗೆಯಲ್ಲಿ ತೊಡಗಿಸಿಕೊಂಡರೆ ಯಾವುದೇ ಭಾಷೆಯನ್ನು ಕಡಿಮೆ ಸಮಯದಲ್ಲಿ ಕರಗತ ಮಾಡಿಕೊಳ್ಳಬಹುದು. ರಾಷ್ಟ್ರೀಯ ಶಿಕ್ಷಣ ನೀತಿ 2020ರ ಕಾಯ್ದೆ ಅನುಸಾರ ಸರ್ಕಾರ ವಿದ್ಯಾರ್ಥಿಗಳ ಅಸಕ್ತಿ ಅನುಸಾರ ಜ್ಞಾನ ಮತ್ತು ಶಿಕ್ಷಣ ನೀಡಲು ಸರ್ಕಾರ ಮುಂದಾಗಿದೆ. ಹೊಸ ಶಿಕ್ಷಣ ನೀತಿಯಲ್ಲಿ ಮಾತೃಭಾಷೆ ಕಲಿಕೆಗೆ ಕೂಡಾ ಹೆಚ್ಚಿನ ಆದ್ಯತೆ ನೀಡಲಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಡಾ. ನಾಗರತ್ನಾ ಪರಾಂಡೆ ಮಾತನಾಡಿ, ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಪರಿಚಯ ನೀಡಿದರು. ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯ ನೀಡುವ ಸವಲತ್ತುಗಳ ಬಗೆಗೆ ಸವಿವರ ಮಾಹಿತಿ ನೀಡಿದರು.

ವಿದ್ಯಾರ್ಥಿಗಳಾದ ಪುಷ್ಪಾ ವಡ್ಡರ, ಮಾನಪ್ಪ ಭಜಂತ್ರಿ, ವಿನಾಯಕ ಕಾಂಬ್ಳೆ, ಅನುರಾಧ ಖಾನಗೌಡ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಪ್ರೊ. ವಿಜಯ ನಾಗನ್ನವರ, ಡಾ.ಕವಿತಾ ಕುಸಗಲ್ ಮತ್ತು ಸಹಾಯಕ ಪ್ರಾಧ್ಯಾಪಕಿ ಪೂಜಾ ಹಲ್ಯಾಳ ಇದ್ದರು.

ಯಾಸ್ಮಿನ್ ಪಿಂಡಾರಿ ಮತ್ತು ಬಿಸ್ಮಿಲ್ಲಾ ಮಕಾನದಾರ ಪ್ರಾರ್ಥಿಸಿದರು. ಡಾ.ಮಧುಶ್ರೀ ಕಳ್ಳಿಮನಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಭಾವತಿ ಖಾನಗೌಡ ಸ್ವಾಗತಿಸಿದರು. ವಿನುತಾ ಜೋಡಳ್ಳಿ ಪರಿಚಯಿಸಿದರು. ಭೀಮಪ್ಪ ಕರವಳ್ಳಿ ವಂದಿಸಿದರು. ಪ್ರವೀಣ ಮುಧೋಳ ಮತ್ತು ಕಮಲಾ ಕೋಳಿ ನಿರೂಪಿಸಿದರು.

# ರಕ್ತದಾನ ಮಹಾನ ಪವಿತ್ರ ಕಾರ್ಯ: ಡಾ. ವೀರಗಿ

**ವಿದ್ಯಾಸಂಗಮ:** ಇತ್ತೀಚಿನ ಆಧುನಿಕ ದಿನಗಳಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಅಪರಿಮಿತ ಸಂಶೋಧನೆಗಳು ಜರುಗಿವೆ. ಆದರೂ ಕೂಡ ರಕ್ತವನ್ನು ಕೃತಕವಾಗಿ ಉತ್ಪಾದಿಸಲು ಸಾಧ್ಯವಾಗಿಲ್ಲ ಎಂದು ಕೆಎಲ್‌ಇ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಮುಖ್ಯಸ್ಥ ಡಾ. ಎಸ್. ವಿ. ವೀರಗಿ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರ ಮತ್ತು ಕೆಎಲ್‌ಇ ಸಂಸ್ಥೆಯ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಸಂಯುಕ್ತಾಶ್ರಯದಲ್ಲಿ ಸೋಮವಾರ (10 ಜನೇವರಿ 2022) ವಿವಿಯ ಕುವೆಂಪು ಸಭಾಂಗಣದಲ್ಲಿ ಏರ್ಪಡಿಸಲಾದ ರಕ್ತದಾನ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಕ್ತಕ್ಕೆ ಪರ್ಯಾಯವಾದ ವಸ್ತು ಜಗತ್ತಿನಲ್ಲಿಲ್ಲ. ಈವರೆಗೆ ಸಂಶೋಧನೆಗಳು ಎಷ್ಟೇ ವ್ಯಾಪಕವಾಗಿ ನಡೆದಿದ್ದರೂ ಕೂಡಾ, ಆರೋಗ್ಯಯುತವಾದ ಮಾನವನ ದೇಹವೆ ರಕ್ತವನ್ನು ನೈಸರ್ಗಿಕವಾಗಿ ಸೃಷ್ಟಿಸುವ ಏಕ ಮಾತ್ರ ಸಾಧನವಾಗಿದೆ. ಹಾಗಾಗೀ ಎಲ್ಲರೂ ನಿಯಮಿತವಾಗಿ ವರ್ಷದಲ್ಲಿ ಮೂರು ಬಾರಿಯಾದರೂ ರಕ್ತದಾನ ಮಾಡಬೇಕು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ರಕ್ತದಾನ ಪುಣ್ಯದ ಕಾರ್ಯವಾಗಿದೆ. ಒಬ್ಬರು ನೀಡಿದ ರಕ್ತದಿಂದ ಕನಿಷ್ಠ ಮೂರು ಜನರ ಜೀವವನ್ನು ಉಳಿಸುವ ಸಾಧ್ಯತೆಯಿದೆ. ರಕ್ತದಾನ ಮಾಡುವುದರಿಂದ ಯಾವುದೇ ಸಮಸ್ಯೆಗಳು ದಾನಿಗೆ ಉಂಟಾಗುವುದಿಲ್ಲ. ಅದರ ಬದಲಾಗಿ ರಕ್ತದಾನಿಯ ಆರೋಗ್ಯ ವೃದ್ಧಿಸುವುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಕುಲಸಚಿವ



ಆರ್‌ಸಿಯು ಆರೋಗ್ಯ ಕೇಂದ್ರ ನೇತೃತ್ವದಲ್ಲಿ ಜರುಗಿದ ರಕ್ತದಾನ ಶಿಬಿರದ ಉದ್ಘಾಟನಾ ಕಾರ್ಯಕ್ರಮಕ್ಕೆ ಕುಲಸಚಿವ ಪ್ರೊ. ಬಸವರಾಜ ಪದ್ಮಶಾಲಿ ಚಾಲನೆ ನೀಡಿದರು.

ಪ್ರೊ.ಬಸವರಾಜ ಪದ್ಮಶಾಲಿ ಮಾತನಾಡಿ, ಈ ಹಿಂದೆ ಅನ್ನದಾನ ಶ್ರೇಷ್ಠ ಎಂದು ಪರಿಗಣಿಸುತ್ತಿದ್ದರು, ಆದರೆ ಇತ್ತೀಚಿನ ದಿನಗಳಲ್ಲಿ ರಕ್ತದಾನ ಎಲ್ಲ ದಾನಗಳಲ್ಲಿ ಶ್ರೇಷ್ಠ ಎಂದು ಹೇಳಲಾಗುತ್ತಿದೆ. ತುರ್ತು ಪರಿಸ್ಥಿತಿಯಲ್ಲಿರುವ ರಕ್ತದ ಅವಶ್ಯಕತೆ ಇರುವವರಿಗೆ ರಕ್ತದಾನ ಮಾಡುವುದರಿಂದ ಜೀವ ಉಳಿಸಿದ ಹೆಮ್ಮೆಯ ಭಾವದ ಜೊತೆಗೆ ದಾನಿಯ ಆರೋಗ್ಯ ಸುಧಾರಣೆಗೆ ರಕ್ತದಾನ ಸಹಕಾರಿಯಾಗುವುದು ಎಂದು ಹೇಳಿದರು.

ವೈದ್ಯಕೀಯ ಕ್ಷೇತ್ರಕ್ಕೆ ಮತ್ತು ಸಂಶೋಧನೆಗಳಿಗೆ ತನ್ನದೆ ಆದ ಇತಿಮಿತಿಗಳಿವೆ. ಹಾಗಾಗೀ ರಕ್ತ ಸೇರಿದಂತೆ ಮರಣದ ನಂತರ ನೇತ್ರ ಮತ್ತು ಉಳಿದ ಅಂಗಾಂಗಗಳ ದಾನಕ್ಕೂ ಕೂಡಾ ಮುಂದಾಗಬೇಕು. ಅಕಾಲಿಕ ನಿಧನ ಹೊಂದಿದ ಪುನೀತ ರಾಜಕುಮಾರ ಅವರ ನೇತ್ರದಾನದ ಫಲವಾಗಿ ನಾಲ್ಕು ಅಂಧರಿಗೆ ದೃಷ್ಟಿ ಲಭಿಸಿದೆ. ನಟ ಪುನೀತ ಅವರ ಈ ಕಾರ್ಯವು ನಮ್ಮೆಲ್ಲರಿಗೂ ಪ್ರೇರಣೆ ನೀಡಲಿ ಎಂದರು.

ಈ ಸಂದರ್ಭದಲ್ಲಿ ವಿವಿಯ ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. 50 ಯೂನಿಟ್ ರಕ್ತ ಸಂಗ್ರಹವಾಯಿತು.

ಮೌಲ್ಯಮಾಪನ ಕುಲಸಚಿವ ಡಾ.ವೀರನಗೌಡ ಪಾಟೀಲ, ಆರ್‌ಸಿಯು ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಯೋಗಿತಾ ಪೋತದಾರ ಮತ್ತು ಡಾ. ಅಪ್ಪಾಸಾಹೇಬ ಕೋಣೆ, ಪ್ರೊ. ಅಶೋಕ ಡಿಸೋಜಾ, ಡಾ.ಸುಮಂತ ಹಿರೇಮಠ, ಕೆಎಲ್‌ಇ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ವೈದಾಧಿಕಾರಿ ಡಾ.ವಿ.ಬಿ. ಮಾನೆ, ಕೆಎಲ್‌ಇ ಡಾ. ಪ್ರಭಾಕರ ಕೋರೆ ಆಸ್ಪತ್ರೆಯ ರಕ್ತನಿಧಿ ಕೇಂದ್ರದ ಸಿಬ್ಬಂದಿ, ವಿವಿಯ ವಿವಿಧ ವಿಭಾಗಗಳ ಮುಖ್ಯಸ್ಥರು, ಡೀನರು, ಇದ್ದರು.

ಸುಜಾತಾ ಎಂ. ಪ್ರಾರ್ಥಿಸಿದರು. ಮಂಜುಳಾ ಸನದಿ ವಂದಿಸಿದರು. ಲಕ್ಷ್ಮಿ ಗುರಿಕಾರ ನಿರೂಪಿಸಿದರು.

## ನೀವು ಬರೆಯಿರಿ....



**‘ಆರ್‌ಸಿಯು ಧ್ವನಿ’** ಪತ್ರಿಕೆಯು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆಯಾಗಿದೆ. ಈ ಪತ್ರಿಕೆಯಲ್ಲಿ ಪ್ರಕಟಗೊಳ್ಳುವ ಲೇಖನ, ಸುದ್ದಿ ಮತ್ತು ವರದಿಗಳ ಬಗ್ಗೆ ತಮ್ಮ ಅಭಿಪ್ರಾಯ ಮತ್ತು ಮೆಚ್ಚುಗೆ ಬರೆದು ಕಳುಹಿಸಬಹುದು. ವಿದ್ಯಾರ್ಥಿಗಳು ಸಿದ್ಧಪಡಿಸುವ ಈ ಪತ್ರಿಕೆಗೆ ತಾವು ನೀಡುವ ಸಕಾರಾತ್ಮಕ ಸಲಹೆಗಳು ವಿದ್ಯಾರ್ಥಿಗಳ ಬರವಣಿಗೆಯ ಸುಧಾರಣೆಗೆ ದಾರಿದೀಪವಾಗುವವು.

## ವರದಿಗೆ ಆಹ್ವಾನ

ನಿಮ್ಮ ವಿಭಾಗದಲ್ಲಿ ಜರುಗುವ ಕಾರ್ಯಕ್ರಮಗಳ ವರದಿಗಳನ್ನು ಕಳುಹಿಸಿ. ಅಷ್ಟೇ ಅಲ್ಲದೆ ತಮ್ಮ ಸ್ವ–ಲಿಖಿತ ಲೇಖನಗಳನ್ನು ಕೆಳಗೆ ತಿಳಿಸಿದ ಇಮೇಲ್‌ಗೆ ಕಳುಹಿಸಬಹುದು. ಯುವ ಮನದ ತಲ್ಲಣ, ಕ್ಯಾಂಟಿನ್ ಕಲರವ, ಹಾಸ್ಟೇಲ್ ಬದುಕಿನ ಚಿತ್ತಾರ, ಬಸ್ ಪ್ರಯಾಣದ ಪ್ರಸಂಗಗಳು ಹೀಗೆ ನಿಮ್ಮೆಲ್ಲ ಅನುಭವದ ಸದಭಿರುಚಿ ಲೇಖನಗಳನ್ನು ಕಳುಹಿಸಬಹುದು. ಆಯ್ದ ಲೇಖನಗಳನ್ನು **‘ಆರ್‌ಸಿಯು ಧ್ವನಿ’** ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

**dhwani@rcub.ac.in**

ಮಾರ್ಗದರ್ಶಕರು: ಪ್ರೊ. ಕಮಲಾಕ್ಷಿ ಜಿ. ತಡಸದ, ಸಂಪಾದಕರು: ವಿದ್ಯಾಶ್ರೀ ಹಾಲಕೇರಿಮಠ, ಪೂಜಾ ಹೆಗಡೆ ಮತ್ತು ಅರುಣ ಹೊಸಮಠ. ಉಪಸಂಪಾದಕರು: ಪ್ರಥಮ ಮತ್ತು ದ್ವಿತೀಯ ವರ್ಷದ ಪತ್ರಿಕೋದ್ಯಮ ವಿದ್ಯಾರ್ಥಿಗಳು ಆರ್.ಸಿ.ಯು ಬೆಳಗಾವಿ,
ಪ್ರಕಾಶನ ಮತ್ತು ಮುದ್ರಣ : ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಭೂತರಾಮನಹಟ್ಟಿ, ಬೆಳಗಾವಿ–591156.